



'ಗೂಟಿಪುವಾ' ನೃತ್ಯಪ್ರಕಾರ ಕಲಿಕೆ



ಮಕ್ಕಳು–ಮೊಮ್ಮಕ್ಕಳು; ಎಲ್ಲರೂ ಪಟಚಿತ್ರವೆಂಬ, ಕ್ರಿಸ್ತಪೂರ್ವ ಐದನೇ ಶತಮಾನದಿಂದ ಬೆಳೆದುಬಂದ ಪ್ರಾಚೀನ ಚಿತ್ರಕಲೆಯನ್ನು ಕಾಯಾ ವಾಚಾ ಮನಸಾ ಸಾಧಿಸುತ್ತಿದ್ದಾರೆ. ಹೊಸ ತಲೆಮಾರು ಇದರಲ್ಲೇ ಬದುಕನ್ನು ಕಟ್ಟಿಕೊಳ್ಳಲು ಹೆಣಗುತ್ತಿದೆ. ಆಧುನಿಕ ಆಕರ್ಷಣೆಗೆ ಒಲಿದವರು ಊರು ಬಿಟ್ಟು ಹೋಗಿದ್ದಾರೆ. ರಘುರಾಜಪುರ ಮಾತ್ರ ಕಲಾವಿದರ ಹಳ್ಳಿಯಾಗಿ ಪಕ್ಕದ ಊರಿನವರು ನಕಲು ಮಾಡುವಷ್ಟು ಹೆಸರು ಮಾಡಿದೆ!

ದೇಶ–ವಿದೇಶಗಳ ಜನ ಇದನ್ನು ನೋಡಲು ಇಲ್ಲಿಗೆ ಬರುತ್ತಾರೆ. ಮೇಳಗಳಲ್ಲಿ ಸರ್ಕಾರ ಇವರ ಕಲೆಯ ಪ್ರದರ್ಶನ, ಮಾರಾಟಕ್ಕೆ ವ್ಯವಸ್ಥೆ ಮಾಡುತ್ತದೆ. ಆದರೂ ಇಲ್ಲಿ ತಯಾರಾಗುವಷ್ಟು ಚಿತ್ರಗಳಿಗೆ ಮಾರುಕಟ್ಟೆಯಿಲ್ಲದೇ ಚಿತ್ರಗಳು ಮನೆಮನೆಯಲ್ಲೂ ರಾಶಿಬಿದ್ದಿವೆ.

ಇಡೀ ರಾಜ್ಯಕ್ಕೆ ಹೆಸರು ತಂದ 'ಗೂಟಿಪುವಾ' ಎಂಬ ನೃತ್ಯಪ್ರಕಾರವನ್ನು ಪುನರುಜ್ಜೀವನಗೊಳಿಸಿದ ಖ್ಯಾತಿ ರಘುರಾಜಪುರ ಹಳ್ಳಿಗಿದೆ. ಈಗಲೂ ಎರಡು ಕಡೆ ವ್ಯವಸ್ಥಿತವಾಗಿ 'ಗೂಟಿಪುವಾ' ಗುರುಕುಲ ನಡೆಯುತ್ತಿದೆ. ಮುಖ್ಯವಾಗಿ ಇದನ್ನು ಕಲಿಯುವವರು ಸಮಾಜ ನಿರ್ಲಕ್ಷಿಸಿರುವ ಸ್ಥರದ ಅನಾಥ ಮಕ್ಕಳು. ಅಂಥವರನ್ನು ಗುರುತಿಸಿ ಕರೆ ತಂದು ಊಟ–ವಸತಿ ಕೊಟ್ಟು 'ಗೂಟಿಪುವಾ' ಪ್ರಕಾರ ಕಲಿಸುವ ವ್ಯವಸ್ಥೆ ಇಲ್ಲಿದೆ. ಈ ಮಕ್ಕಳಿಗೆ ಇಡೀ ದಿನ ಅದೊಂದೇ ಧ್ಯಾನ. ಅಲ್ಲಿ ಯೋಗಾಸನವಿದೆ, ಬಿರುಬೀಸು ನಾಟ್ಯ ಭಂಗಿಗಳಿವೆ.

'ಗೂಟಿಪುವಾ' ಎಂದರೆ ಸರ್ವರೀತಿಯಲ್ಲೂ ಒಳ್ಳೆಯ ವ್ಯಾಯಾಮ. ವಿಷಾದವೆಂದರೆ, ಈ ಗುರುಕುಲಗಳಿಗೆ ಸರ್ಕಾರದ ಯಾವ ನೆರವೂ ಸಿಗುತ್ತಿಲ್ಲ. ಮಂತ್ರಿ ಮಹೋದಯರು ವೇದಿಕೆ ಮೇಲೆ ಈ ಕಲೆಯನ್ನು ಹಾಡಿ ಹೊಗಳುತ್ತಾರೆ. ಅವರು ಹೋದ ಮೇಲೆ ಕಲೆ ಮೂಲೆಪಾಲಾಗುತ್ತದೆ. ಇಲ್ಲಿನ ಮಕ್ಕಳು ಒಂದು ವಯಸ್ಸಿನವರೆಗೆ ಕಲಾವಿದರಾಗಿ ರಂಗದ ಮೇಲೆ ಕುಣಿಯಬಹುದು. ನಂತರ ತಮ್ಮ ಜೀವನ ನಿರ್ವಹಣೆಗಾಗಿ ಬೇರೆ ದಾರಿ ನೋಡಿಕೊಳ್ಳುವುದು ಅನಿವಾರ್ಯ. 'ಗೂಟಿಪುವಾ' ಎಂಬ ಅದ್ಭುತ ನೃತ್ಯ ಪ್ರಕಾರ ಹೊಸ ಬೆಳೆಯಿಲ್ಲದೇ, ಹಳಬರಿಗೆ ನೆಲೆಯಿಲ್ಲದೇ ಸೊರಗುತ್ತಿದೆ.

ಈ ಸಮಸ್ಯೆ ರಘುರಾಜಪುರದ ಮೂಲ ಕಾಯಕವಾದ ಪಟಚಿತ್ರ ರಚನೆಯ ಕುಟುಂಬಗಳನ್ನೂ ಕಾಡುತ್ತಿದೆ. ಕಲೆಯೇ ಸಂಸಾರದ ಎಲ್ಲರಿಗೂ ಹೊಟ್ಟೆ ತುಂಬಿಸುವ ಕಾಲ ಹೊರಟುಹೋಗಿದೆ. ಇವರಿಗೆ ಆನ್‌ಲೈನ್‌ನಲ್ಲಿ ಮಾರಾಟ ಮಾಡುವ ತಂತ್ರ ಇನ್ನೂ ಸಿದ್ಧಿಸಿಲ್ಲ. ದೇಶದಾದ್ಯಂತ ನಡೆಯುವ ಮೇಳ, ಉತ್ಸವಗಳಲ್ಲಿ ವರ್ಷಕ್ಕೆ ಒಂದೋ ಎರಡು ಬಾರಿ ಭಾಗವಹಿಸುವ ಅವಕಾಶ ಸಿಕ್ಕುವುದಾದರೂ, ಅದನ್ನು ನಂಬಿ ಜೀವನ ನಡೆಸುವಂತಿಲ್ಲ. ಈ ಮೇಳಗಳಲ್ಲಿ ಇವರ ಕಲೆಯನ್ನು ಜನ ನೋಡಿ ಮೆಚ್ಚುತ್ತಾರಾದರೂ ಕೊಂಡುಕೊಳ್ಳುವುದು ಕಡಿಮೆ. ಹೀಗಾಗಿ ಕಲೆಯಿಂದಲೇ ಹೊಟ್ಟೆ ತುಂಬಿಸುವ ಕಾಲ ಮರೆಯಾಗಿ ದಿಕ್ಕೆಟ್ಟು ಕುಳಿತಿದ್ದಾರೆ.

ರಘುರಾಜಪುರದ ಪಟಚಿತ್ರಗಳ ವಿಶೇಷವೆಂದರೆ ಕಲಾವಿದರೇ ಮಾಡಿಕೊಳ್ಳುವ ಭಿತ್ತಿ ಅಥವಾ ಕ್ಯಾನ್ವಾಸ್. ಮನೆಯವರ ಹಳೆಯ ಸೀರೆಗಳೆಲ್ಲ ಇವರ ಕ್ಯಾನ್ವಾಸ್‌ಗಳಾಗಿ ಬದಲಾಗುತ್ತವೆ. ಸೀರೆ ಮೇಲೆ ಸುಣ್ಣ ಬಳಿದು ಒಂದರ ಮೇಲೆ ಒಂದು ಪದರು ಜೋಡಿಸಿ ಒಣಗಿಸುತ್ತಾರೆ. ಅದನ್ನು ಬೇಕಾದ ಅಳತೆಯಲ್ಲಿ ಕತ್ತರಿಸಿ ಸ್ಥಳೀಯವಾಗಿ ಸಿಗುವ ವಸ್ತುಗಳಿಂದ ಪ್ರಾಕೃತಿಕ ಬಣ್ಣಗಳನ್ನೇ ತಯಾರಿಸಿ ಬಳಸುವ ರೀತಿಗೆ ಹಲವಾರು ಶತಮಾನಗಳ ಪರಂಪರೆಯಿದೆ. ಚೂಪಾದ ನಿಬ್ಬುಗಳನ್ನು ಇವರು ಕಪ್ಪು ಬಿಳುಪು ಚಿತ್ರ ರಚನೆಗೆ ಬಳಸುತ್ತಾರೆ.

ಚೂಪಾದ ಚೂರಿಯಂಥ ಈ ನಿಬ್ಬುಗಳು ಭಿತ್ತಿ ಕೊರೆದು ಚಿತ್ರಗಳು ಅರಳುತ್ತವೆ. ಇಲ್ಲಿ ಕಲಾವಿದ ಎಷ್ಟು ನಿಷ್ಣಾತನಿರಬೇಕೆಂದರೆ, ಒಂದು ರೇಖೆ ವ್ಯತ್ಯಾಸವಾದರೂ ಇಡೀ ಚಿತ್ರ ಕೆಡುತ್ತದೆ. ಹೀಗೆ ಬಿಳಿಯ ಭಿತ್ತಿ ಮೇಲೆ ಕಪ್ಪು ಶಾಯಿಯಲ್ಲಿ ಕೊರೆದು ರಚಿಸುವ ಚಿತ್ರಗಳು ಬಹಳ ಆಕರ್ಷಕ. ಅದರಲ್ಲಿ ಭಾಗವತ, ರಾಮಾಯಣದ ಕಥೆಗಳು ಅರಳುತ್ತವೆ.

ರಘುರಾಜಪುರದ ಕಲಾವಿದರು ಈಗಿನ ಜನಕ್ಕೆ ಏನು ಬೇಕೋ ಅದನ್ನೂ ಮಾಡಲು ಹವಣಿಸಿದ್ದಾರೆ. ನಮ್ಮ ಅಡಿಕೆಯನ್ನೇ ಹೋಲುವ ಕಾಯೊಂದು ಅಲ್ಲಿ ಸಿಗುತ್ತದೆ. ಅದು ಹಗುರ. ಆ ಕಾಯಿಯ ಮೇಲೆ ಚಿತ್ರ ಬಿಡಿಸಿ ಆಟಿಕೆಗಳನ್ನು ತಯಾರಿಸಲಾಗುತ್ತದೆ, ನಮ್ಮಲ್ಲಿ ಕೊಬ್ಬರಿ ಮೇಲೆ ಚಿತ್ರ ಕೊರೆಯುವ ಹಾಗೆ. ಅಲ್ಲದೆ ಬಾಗಿಲ ತೋರಣ, ಸಿಪ್ಪೆಗೂಡಿದ ತೆಂಗಿನ ಕಾಯಿಯ ಮೇಲೆ ಬಿಳಿ ಬಣ್ಣ ಹಚ್ಚಿ ಅದರ ಮೇಲೆ ಬಿಡಿಸುವ ಚಿತ್ರಗಳು ಬೇಡಿಕೆಯಲ್ಲಿವೆ.

ರಘುರಾಜಪುರದ ಜನರ ರಕ್ತದ ಕಣಕಣದಲ್ಲೂ ಕಲೆಯಿದೆ. ಅವರಿಗೆ ಕಣ್ಣು ಮುಚ್ಚಿದರೆ ಕಲೆಯೇ ಕಾಣುತ್ತದೆ. ಅವರ ಕಲೆ, ಈ ಕಾಲದ ಪ್ರವಾಹದಲ್ಲಿ ಈಜಿ ದಡ ಸೇರಬಲ್ಲುದೇ?

ಪ್ರತಿಕ್ರಿಯಿಸಿ: feedback@sudha.co.in